ಅಸಲು ದಾವಾ ಸಂಖ್ಯೆ **78/2016** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **30-06-2025**

ಪಾಟೀ ಸವಾಲು : ಶ್ರೀ ಎಂ.ಜಿ ನ್ಯಾಯಾವಾದಿಗಳಿಂದ ರವರಿಂದ

ನಾನು 8 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಭಾಷಯನ್ನು ಓದಲು ಮತ್ತು ಬರೆಯಲು ಬರುತ್ತದೆ. ನಾವು ಈ ದಾವೆಯನ್ನು ನನ್ನ ತಾತನ ಆಸ್ತಿಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇವೆ. ನಾವು ಈ ದಾವೆಯನ್ನು 8 ಜನರ ವಿರುದ್ದ ಸಲ್ಲಿಸಿರುತ್ತೇನೆ. ನನ ಜೊತೆ 3 ನೇ ಪ್ರತಿವಾದಿಯು ಚೆನ್ನಾಗಿದ್ದಾರೆ.

2. ನನಗೆ ದಾವಾ ಆಸ್ತಿಯ ಸರ್ವೆ ನಂಬರ್ ಗಳು, ಚಕ್ಕುಬಂದಿ ಮತ್ತು ವಿಸ್ತೀರ್ಣವನ್ನು ಹೇಳಲು ಆಗುವುದಿಲ್ಲ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಗಳಿಗೆ ಚಕ್ಕುಬಂದಿಯನ್ನು ಕೊಡಲು ನನಗೇನು ತೊಂದರೆ ಇರುವುದಿಲ್ಲ. ದಾವಾ ಆಸ್ತಿಗಳ ಚಕ್ಕುಬಂದಿಗಳನ್ನು ಕಂದಾಯ ಕಾರ್ಯದರ್ಶಿಗಳಿಂದ ಪಡೆಯಲ್ಲು ಆಗದಿದ್ದ ಕಾರಣ ದಾವೆ ಸಲ್ಲಿಸುವ ಸಮಯದಲ್ಲಿ ದಾವೆ ಆಸ್ತಿಗಳ ಚಕ್ಕುಬಂದಿಯನ್ನು ನೀಡಿರುವುದಿಲ್ಲ. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಕಂದಾಯ ಕಾರ್ಯದರ್ಶಿಗಳಿಂದ ಚಕ್ಕುಬಂದಿಯನ್ನು ಪಡೆದಿರುವ ಬಗ್ಗ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ.

3. ದಾವಾ ಆಸ್ತಿಗಳು ಮೂಲತಹ ನನ್ನ ತಾತ ರಂಗೇಗೌಡರ ಜಮೀನು. ದಾವಾ ಆಸ್ತಿಗಳು ನನ್ನ ತಾತನಿಗೆ ಹೇಗೆ ಬಂದವು ಎಂದು ನನಗೆ ಗೊತ್ತಿಲ್ಲ. ಗಂಗಪ್ಪ ಮತ್ತು ರಂಗೇಗೌಡರ ಹೆಸರಿನಲ್ಲಿ ಯಾವ ಆದಾರದ ಮೇಲೆ ಖಾತೆಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾವು ಅವರಿಗೆ ಯಾವುದೇ ದಾಖಲೆಗಳನ್ನು ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕುಣಿಗಲ್ ನಲ್ಲಿ ವಾಸ ಇರುತ್ತೆನೆ. ವಡ್ಡರಹಳ್ಳಿ ಗ್ರಾಮಕ್ಕೆ ಆಗಾಗ ಬಂದು ಹೋಗು ಮಾಡುತ್ತೇನೆ. ಸಾಕ್ಷಿಯು ಮುಂದುವರೆದು ದೇವರ ಕಾರ್ಯವನ್ನು ವಡ್ಡರಹಳ್ಳಿ ಗ್ರಾಮದಕ್ಕೆ ಬಂದು ಮಾಡುವುದಾಗಿ ನುಡಿಯುತ್ತಾರೆ.

4. 7 ನೇ ವಾದಿಯು ಭದ್ರಾವತಿಯಲ್ಲಿ ವಾಸವಿದ್ದಾರೆ. ಸಾಕ್ಷಿಯು ಮುಂದುವರೆದು ಅವರು ನನ್ನ ತಂದೆಯ 2 ನೇ ಹೆಂಡತಿ. 7 ನೇ ವಾದಿಯು ಭದ್ರಾವತಿಯಲ್ಲಿ ಸುಮಾರು 45 ವರ್ಷಗಳಿಂದ ವಾಸ ಇದ್ದಾರೆ. ಸಾಕ್ಷಿಯು ಮುಂದುವರೆದು ಅವರುಸಹ ವಡ್ಡರಹಳ್ಳಿ ಗ್ರಾಮಕ್ಕೆ ಆಗಾಗ ಬರುತ್ತಿದ್ದು, ವಡ್ಡರಹಳ್ಳಿ ಗ್ರಾಮದಲ್ಲಿ ದೇವರ ಕಾರ್ಯಾವನ್ನು ಮಾಡುತ್ತಾರೆ.

5. ನನ್ನ ಆದಾರ್, ಪಡಿತರ ಚೀಟಿ ಮತ್ತು ಮತದಾನಪಟ್ಟಿಯು ಕುಣಿಗಲ್ ನಲ್ಲಿ ಇದೆ. ನನ್ನ ತಾತ ರಂಗೇಗೌಡರಿಗೆ ತಿಮ್ಮಮ್ಮ ಎಂಬ ಒಬ್ಬಳೇ ಹೆಂಡತಿ. ಸದರಿ ರಂಗೇಗೌಡ ಮತ್ತು ತಿಮ್ಮಮ್ಮರವರಿಗೆ 5 ಜನ ಮಕ್ಕಳು. ಅವರುಗಳೆಂದರೆ ಸಿದ್ದೇಗೌಡ, ನಂಜಪ್ಪ, ರಂಗಮ್ಮ, ನಿಂಗಮ್ಮ ಮತ್ತು ಚನ್ನಮ್ಮ. ಸದರಿ 5 ಜನ ಮಕ್ಕಳು ಯಾರು ಜೀವಂತ ಇರುವುದಿಲ್ಲ.

6. ಸದರಿ ಸಿದ್ದೇಗೌಡರ ಹೆಂಡತಿಯ ಹೆಸರು ಜವರಮ್ಮ. ತೊಪಮ್ಮ ನನ್ನ ತಾಯಿ. ಸದರಿ ಸಿದ್ದೇಗೌಡ ಮತ್ತು ಜವರಮ್ಮ ರವರಿಗೆ ಒಟ್ಟು 8 ಜನ ಮಕ್ಕಳು. ಅವರುಗಳೆಂದರೆ ಗಂಗಪ್ಪ, ಲಕ್ಷ್ಮಮ್ಮ, ಬಲರಾಮೇಗೌಡ, ಕೃಷ್ಣಪ್ಪ, ಪಾರ್ವತಮ್ಮ, ನಾಗರಾಜು, ಕಮಲಮ್ಮ ಮತ್ತು ರಂಗೇಗೌಡ.

7. ಸದರಿ ನಾಗರಾಜು ರವರ ಹೆಂಡತಿ ಹೆಸರು ಪದ್ಮಮ್ಮ. ನಾಗರಾಜು ಮತ್ತು ಪದ್ಮಮ್ಮ ರವರಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಗಂಗಾಧರ ಮತ್ತು ಪುನೀತ್ ಎಂದರೆ ಸರಿ. ಸದರಿ ಪುನೀತ್ ರವರನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ತಾಯಿಯನ್ನು ಮಾಡಿರುವುದಾಗಿ ನುಡಿಯುತ್ತಾರೆ. ನಾಗರಾಜು ರವರಿಗೆ ಪುನೀತ್ ಎಂಬ ಮಗ ಇರುವುದು ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ಅರಿವಿಗೆ ಇರಲಿಲ್ಲ.

8. ಸದರಿ ತೋಪಮ್ಮ ರವರಿಗೆ ಒಟ್ಟು 7 ಜನ ಮಕ್ಕಳು ಅವರುಗಳೆಂದರೆ ಗಂಗಮ್ಮ, ಜಯಮ್ಮ, ಗೌರಮ್ಮ, ಶಿವಮ್ಮ, ಮಹಾದೇವಮ್ಮ, ರತ್ನಮ್ಮ ಮತ್ತು

ಮಂಜುಮಹೇಶ್.  ಜಯಮ್ಮ ರವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ, ಸೇರಿಸಲು ನನಗೇನು ತೊಂದರೆ ಇಲ್ಲ.

9. ಶಿವಮ್ಮ ರವರಿಗೆ ಒಟ್ಟು ಇಬ್ಬರು ಮಕ್ಕಳು ಅವರುಗಳೆಂದರೆ ದೇವರಾಜು ಮತ್ತು ರಾದಮ್ಮ. ಸದರಿ ರಾದಮ್ಮ ರವರನ್ನು ಈ ದಾವೆಗೆ ಸೇರಿಸಿರುವುದಿಲ್ಲ, ಸೇರಿಸಲು ನನಗೇನು ತೊಂದರೆ ಇಲ್ಲ.  ಈ ಮೇಲೆ ಹೇಳಿದ ಸಂಬಂದಕ್ಕೆ ಸಂಬಂದಿಸಿದಂತೆ ನಾನು ವಂಶ ವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

10.  ನಾವು ವಾದಿಗಳು ಮತ್ತು ಪ್ರತಿವಾದಿಗಳು ಈಗಲೂ ಒಟ್ಟಿಗೆ ಇದ್ದೇವೆ, ಒಟ್ಟಿಗೆ ದೇವರ ಕಾರ್ಯವನ್ನು ಮಾಡುತ್ತೇವೆ. ನನ್ನ ಹೆಸರು ಮಂಜುಮಹೇಶ್. ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಹೆಸರು ಮಂಜುಮಹೇಶ್ ಎಂದೇ ಇದೆ.  ನನನ ಹೆಸರು ಮಂಜುಮಹೇಶ್ ಎಂದು ತೋರಿಸಲು ನನ್ನ ಶಾಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ. ನನ್ನ ಜನನ ಪ್ರಮಾಣ ಪತ್ರದಲ್ಲಿಯೂ ಸಹ ನನ್ನ ಹೆಸರು ಮಂಜುಮಹೇಶ್ ಎಂದು ನಮೂದು ಇದೆ.  ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ.

11.  ದಾವಾ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಸ್ವತ್ತುಗಳು.  ದಾವಾ ಆಸ್ತಿಗಳಲ್ಲಿ ನಾವು ಒಟ್ಟು ಕುಟ್ಟುಂಬದಲ್ಲಿ ಉಳುಮೆ ಮಾಡಿಕೊಂಡು ಇರುವ ಬಗ್ಗ ಕಂದಾಯ ದಾಖಲೆಗಳನ್ನು ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ.

12.  ನನ್ನ ತಾತ ರಂಗೇಗೌಡರು ಸಾಯುವಾಗ ನಾನು ಇನ್ನೂ ಜನಿಸಿರಲಿಲ್ಲ.  ನನ್ನ ತಾತನ ಮರಣ ನಂತರ 1 ರಿಂದ 6 ಮತ್ತು 10 ನೇ ಪ್ರತಿವಾದಿಗಳ ತಂದೆ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ಅಕ್ರಮ ಖಾತೆಯನ್ನು ನಾವು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ, ಈ ದಾವೆಯನ್ನು ಸಲ್ಲಿಸುವ

ಸಮಯದಲ್ಲಿ ಅಕ್ರಮವಾಗಿ ಖಾತೆ ಮಾಡಿಕೊಂಡಿರುವ ವಿಚಾರ ನಮಗೆ ತಿಳಿದು ಬಂದಿರುತ್ತದೆ.

13. ಕಾನೂನು ಬದ್ಧವಾಗಿಯೇ ಖಾತೆಯಾಗಿರುವುದರಿಂದ ನಾವು ಸದರಿ ಖಾತೆಗಳನನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಗಳಲ್ಲಿ ಭಾಗ ಕೊಡಿ ಎಂದು 1 ಮತ್ತು 6 ನೇ ಪ್ರತಿವಾದಿಯನ್ನು ಕೇಳಿರುತ್ತೇವೆ, ಅಲ್ಲದೇ ನಮ್ಮ ಊರಿನ ಮಾಸ್ಟರ್ ಮುಖಾಂತರ ಕೇಳಿಸಿರುತ್ತೇವೆ. ಭಾಗವನ್ನು ಕೇಳಿದ ದಿನಾಂಕ ನನಗೆ ನೆನಪಿಲ್ಲ. 2016 ರಲ್ಲಿ ಭಾಗ ಬೇಕೆಂದು ಕೇಳಿರುತ್ತೇವೆ.

14. ನಾವು ಭಾಗವನ್ನು ಕೇಳಿದಾಗ ದಾವಾ ಆಸ್ತಿಗಳಲ್ಲಿ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಹೇಳಿದ್ದರು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ